ಆ) ಹಾಗಿದ್ದಲ್ಲಿ ಪ್ರತಿಶತ ಎಷ್ಟು ಏರಿಸಲು ನಿರ್ಧರಿಸಲಾಗಿದೆ, ಹಾಗೂ ಏರಿಸಲು ಕಾರಣಗಳೇನು ?

ಇ) ಇದರಿಂದ ಪ್ರತಿಶತ ಎಷ್ಟು ನಷ್ಟವನ್ನು ಭರಿಸಲಾಗುವುದು ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ವಿಜಾಪುರ ನಗರದಲ್ಲಿ ಸಿಟಿಬಸ್ ನಿಲ್ದಾಣ

566 - ಶ್ರೀ ಬಸನಗೌಡ ಆರ್. ಪಾಟೀಲ್ (ವಿಜಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ನಗರದಲ್ಲಿ ಈಗಿರುವ ಸಿಟಿಬಸ್ ನಿಲ್ದಾಣ ಅತೀ ಚಿಕ್ಕದಾಗಿದ್ದು ಹಾಗೂ ನಗರದ ಮಧ್ಯವರ್ತಿಯಲ್ಲಿರುವುದರಿಂದ ಜನಸಾಮಾನ್ಯರಿಗೆ ದಿನ ನಿತ್ಯ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ನೂತನ ಸಿಟಿಬಸ್ ನಿಲ್ದಾಣ ನಿರ್ಮಿಸಲು ಜಮೀನು ಖರೀದಿ ಮಾಡಲಾಗಿದೆಯೇ, ಅದರ ಸ್ಥಳ ಯಾವುದು ಹಾಗೂ ಅದಕ್ಕಾಗುವ ಖರ್ಚು ಎಷ್ಟು ನೂತನ ನಿಲ್ದಾಣವನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಿ ಕಾರ್ಯಗತ ಮಾಡಲಾಗುವುದು.

ಇ) ಕೇಂದ್ರ ಬಸ್ ನಿಲ್ದಾಣ ಮತ್ತು ಸಿಟಿ ಬಸ್ ನಿಲ್ದಾಣ ಒಂದೇ ಇರುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬಂದಿರುತ್ತದೆ.

ಆ) ಖರೀದಿಸಲಾಗಿಲ್ಲ, ಆದರೆ ನರಸಿಂಹ ದೇವಸ್ಥಾನದ ಸಮೀಪದ ಗುರುಭವನದ ಪಕ್ಕ ಪೋಲೀಸ್ ವಸತಿ ಗೃಹಗಳ ಪಕ್ಕ ಹಾಗೂ ತಾಜ್ ಬಾವಡಿ ಪ್ರದೇಶ ಮತ್ತು ಅದರ ಎದುರಿಗಿರುವ ನಗರಾಭಿವೃದ್ಧಿ ಇಲಾಖೆಗೆ ಸೇರಿದ ಖಾಲಿ ನಿವೇಶನಗಳು ಸಿಟಿ ಬಸ್ ನಿಲ್ದಾಣ ನಿರ್ಮಿಸಲು ಸೂಕ್ತವಾಗಿವೆಯೆಂದು ಗುರುತಿಸಲಾಗಿದೆ. ಆದರೆ ಯಾವ ನಿವೇಶನವು ಇನ್ನೂ ಲಭ್ಯವಾಗಿಲ್ಲ.

ಇ) ಬಂದಿರುತ್ತದೆ.

ನಂದಿ ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆಯ ಸಂಗ್ರಹಣೆ.

567 - ಶ್ರೀ ಬಸನಗೌಡ ಆರ್. ಪಾಟೀಲ್ (ವಿಜಾಪುರ) : ಮಾನ್ಯ ಸಕ್ಕರೆ, ವಿಜ್ಞಾನ ಪರಿಸರ ಹಾಗೂ ಜೀವಪರಿಸ್ಥಿತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?